ಎದಿರುಗೊಳ್ವ ಬಾ ಸಖೀ
ಮುದುಕ ಪದುಮನಾಭನ
ಸದಮಲಾಂಗ ಶ್ರೀಕರನ
ಮುದುಕ ಕಪಿ ಸುಧಾಕರನ

ಎಂದು ಏರು ದನಿಯಲ್ಲೇ ಹಾಡುತ್ತಿದ್ದಳು. ಸುಬ್ಬಿ ಗದರಿದಳು. 'ತಂಗೀ ಸುಮ್ನಿರೇ, ಕುಶಾಲ ಮಾಡೂಲೂ ಹೊತ್ತು ಗೊತ್ತು ಇಲ್ಯ.. ಯಾರಾರು ಕೇಳೀರೆ' ಎಂದಳು. 'ಈ ವಾಲ್ಗದ ಗೌಜನಲ್ಲಿ ಯಾರೀಗೂ ಕೇಳ್ತಿಲ್ಲೆ ಹೆದ್ರಡ. ಮತ್ತೆ ಅಂವ ಮುದುಕ ಕಪಿ ಅಲ್ಲದ್ದೆ ಮತ್ತ ಯಂತದು. ದೊಡ್ಡ ಕುಳ ಹೇಳಿ ಸಂಬಂಧ ಕುದ್ರಿದ್ದು. ಶಿವರಾಮ ಮಾವ ಗಂಟಬಿಜ್ಜವಲ್ಲ. ಸರೀ ಲಾಗಲಚ್ಚ ಆಗ್ತು ಇವ್ಕೆ. ಯನ್ನ ಜಾತ್ಕಾನೂ ಕೊಟ್ಟಿದ್ದಾಯ್ತು . ಜಾತ್ಗ ಆಗತಿಲ್ಲೆ ಹೇಳಿ ಹೇಳಿಕಳ್ಸದ. ಈಗ ಜಾತ್ಗದ ಮೇಲೆ ಆಜಿಲ್ಲೆ ಮದ್ವೆ. ಯಂಗ್ ಸರೀ ಗೊತ್ತಿದ್ದು. ಕೂಸ್ ನೋಡೀರೆ ಕರೀ ಬೆಕ್ಕು' ಎಂದು ಸಿಟ್ಟು ತೀರಿಸಿಕೊಂಡಳು. ಜೊತೆ ಇದ್ದವರು 'ಮಳ್ಳ ಕೂಸೆ ಸುಮ್ನಿರೆ ಎಂದು ಬಾಯಿ ಮುಚ್ಚಿಸಿದರು. ಗಂಗೆ 'ಕೂಸೆ ಆ ದೇವ್ರು ಇಂಥ ಗಂಡಿಗೆ ಇಂಥ ಹೆಣ್ಣು ಹೇಳಿ ಬರದೇ ಕಳಸ್ತನಡ, ನಾವು ಅಂದಕಂಬದು; ಅಂವ ಆಗಾಕಾಯ್ತು ಇಂವ ಆಗಕಾಯ್ತು ಹೇಳಿ,' ಎಂದರೆ 'ಗಂಗತ್ತೇ ನಿಂಗ್ ಮಾತ್ರ ಆ ಭಗವಂತನೇ ಹಣೆಲ್ಲಿ ಬರದಿದ್ದೇಯ. ಸಾಕ್ಷಾತ್ ದೇವರು' ಎನ್ನುತ್ತಾ ಆಶೀರ್ವಾದ ಮಾಡುವ ಭಂಗಿಯಲ್ಲಿ ಕೈ ಎತ್ತಿ ನಿಂತಳು. ಎಲ್ಲರೂ ನಗಾಡಿದರು.

'ಯನ್ನ ಮದವೆ ಹೊತ್ನಲ್ಲೆಲ್ಲಾ ಹೆಣ್ಣ ಮಕ್ಕಳ ಕೇಳ ಪದ್ಧತಿನೆ ಇತ್ತಿಲ್ಲೆ 'ಎಂದಳು ಗಂಗೆ.

'ಹಂಗಾರೆ ಈಗಾಗಿದ್ರೆ ದೇವ್ರು ಮಾವನ ಮದ್ವೆ ಆಗ್ತಿದ್ಯಾ ಗಂಗತ್ತೆ?' ಎಂದಳು ಮೀನಾಕ್ಷಿ.

'ಇಲ್ಯೆ ಹರ್ಗೀಸ್ ಅನು ಮದ್ವೆ ಆಗ್ತಿದ್ದನಿಲ್ಲೆ. ಮೂಗ್ನ ತುದೀಲ್ಲೆ ಶಿಟ್ಟು ಜಮದಗ್ನಿ ರೂಪ ಅಯ್ಯಯ್ಯೋ . ಯಂತ ಮಾಡದು ಹೇಳು. ಆ ಭಗವಂತ ಬರ್ದಿಗಿದ.ಇಂಥ ಹೆಣ್ಣಿಗೆ ಇಂಥದೇ ಹೆಣ್ಣು ಹೇಳಿ. ನಮ್ಮ ಕೈಯಲ್ಲಿ ಇಲ್ಲೆ'. ಯನ್ನ ಮದ್ವೆ ಸುದ್ದಿ ಕೇಳೀರೆ' ..ಎಂದಳು ಗಂಗೆ.

'ಯಂತದು ಹೇಳೆ ಗಂಗತ್ತೆ'. ಮೀನಾಕ್ಷಿಯ ವಾರಾತ. ಯನ್ನ ಮದ್ವೆನೆ ಒಂದ ಕತೆ. ಯನಗಾಗ ಬರೀ ಹದ್ನಾರೊ ಹದಿನೇಳೋ ವರ್ಷ.ಅದೆಲ್ಲಾ ಬುದ್ಧಿ ಬೆಳೆಯೂ ವಯಸ್ಸ್ ಅಲ್ದೆ ಅದು. ಯನಗೆ ಅಪ್ಪಯ್ಯ ಇಲ್ಲೆ. ಅಜ್ಜನ

